# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1310 |
| ಸದಸ್ಯರ ಹೆಸರು | ಶ್ರೀ ಎನ್ ರವಿಕುಮಾರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.03.2026 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆಯಿಂದ ಬಡ ರೋಗಿಗಳು ಪರದಾಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಕುರಿತು ಸರ್ಕಾರದ ನಿಲುವೇನು; ಔಷಧಗಳ ಕೊರತೆಗೆ ಕಾರಣವೇನು; (ವಿವರ ನೀಡುವುದು); | ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಉಂಟಾಗದಂತೆ ವಹಿಸಲಾದ ಕ್ರಮಗಳು ಕೆಳಕಂಡಂತಿವೆ:<br><br>1. ಆರೋಗ್ಯ ಇಲಾಖೆಯಡಿ ಉಚಿತವಾಗಿ ವಿತರಿಸಲಾಗುವ ಔಷಧಿಗಳ ಅಗತ್ಯ ಜೀವರಕ್ಷಕ ಔಷಧಿಗಳನ್ನು ಸಂಗ್ರಹಿಸಲು ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ AbArK ಹಾಗೂ ARS ಅನುದಾನಗಳನ್ನು ಬಳಸಿಕೊಂಡು ಖರೀದಿಸಬಹುದಾಗಿರುತ್ತದೆ.<br><br>2. ವಾರ್ಷಿಕ ಇಂಡೆಂಟ್ ಔಷಧಿಗಳ ಖರೀದಿ ಪ್ರಸ್ತಾಪವನ್ನು ಅಂದಾಜು ಮೌಲ್ಯ ರೂ.880.68 ಕೋಟಿಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 129 ಎಫ್ ಪಿ ಆರ್ 2025 , ದಿನಾಂಕ:1.08.2025 ರಂತೆ ಬಹುತೇಕ ಅಗತ್ಯ ಔಷಧಿಗಳನ್ನು KSMSCL ವತಿಯಿಂದ ತ್ವರಿತವಾಗಿ ಖರೀದಿಸಿ ವಿತರಿಸಲು ಕ್ರಮ ಕೈಗೊಳಲಾಗುತ್ತಿದೆ.<br><br>3. ಸರ್ಕಾರದ ಆದೇಶ ಸಂಖ್ಯೆ:ಆಕುಕ 33 ಎಫ್ ಪಿ ಎಸ್ 2026, ದಿನಾಂಕ:18.02.2026 ರಂತೆ ತಾತ್ಕಾಲಿಕವಾಗಿ ಎರಡು ತಿಂಗಳ ಅವಧಿಗೆ ರೂ.3,000.00 ಲಕ್ಷಗಳ ಅನುದಾನವನ್ನು ಜಿಲ್ಲೆಗಳಲ್ಲಿ ಹಾಗೂ ಸ್ಥಳೀಯವಾಗಿ ಅಗತ್ಯ ಔಷಧಿಗಳನ್ನು ಖರೀದಿಸಿ ಬಳಸಲು ಅನುಮತಿ ನೀಡಿರುತ್ತದೆ. (**ಅನುಬಂಧ - 1**ರಲ್ಲಿ ನೀಡಲಾಗಿದೆ)<br><br>ರಾಯಚೂರು ಜಿಲ್ಲೆಯಲ್ಲಿ ಔಷಧಿಗಳ ಕೊರತೆ ನೀಗಿಸಲು ಸ್ಥಳೀಯವಾಗಿ ಕ್ರಮವಹಿಸಲಾಗುತ್ತಿದೆ. ಮುಂದುವರೆದು, ಜಲಾಲನಗರದಲ್ಲಿ ಸಿಕ್ಕಿರುವ ಔಷಧಿಗಳು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ. ತನಿಖಾ ವರದಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿರುತ್ತದೆ. |
| ಆ) | ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆಯಿದ್ದರೂ ರಾಯಚೂರು ಜಿಲ್ಲೆಯ ಜಲಾಲನಗರ ರುದ್ರ ಭೂಮಿಯ ಪಕ್ಕದ ರಸ್ತೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಗಳನ್ನು ಎಸೆದಿರುವ ಕುರಿತು ಸರ್ಕಾರ ಕೈಗೊಂಡ ಕ್ರಮವೇನು; ಪೊಲೀಸ್ ಕೇಸು ದಾಖಲಿಸಲಾಗಿದೆಯೇ; (ವಿವರ ನೀಡುವುದು); | |
| ಇ) | ಸ್ಕ್ಯಾನಿಂಗ್ ಹಾಗೂ ಇತರ ವೈದ್ಯೇತರ ತಪಾಸಣೆಯ ಬಿಲ್ಲುಗಳು ಬಾಕಿ ಇರುವ ಕಾರಣಕ್ಕಾಗಿ ಬಡ ರೋಗಿಗಳು ಉಚಿತ ವ್ಯವಸ್ಥೆಯಿಂದ ವಂಚಿತರಾಗಿರುವ ಬಗ್ಗೆ | ರಾಜ್ಯದಲ್ಲಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು PPP ಮಾದರಿಯಲ್ಲಿ ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 15 ಸಿ.ಟಿ. (CT Scan) 06 ಎಂ.ಆರ್.ಐ (MRI) ಕೇಂದ್ರಗಳು |

| | | |
|---|---|---|
| | ಸರಕಾರದ ನಿಲುವೇನು; | ಸೇವೆಗಳನ್ನು ಒದಗಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಆಕುಕ 243 ಎಫ್‌ಪಿಆರ್ 2024, ದಿನಾಂಕ: 29/01/2025 ರಂತೆ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒದಗಿಸಲಾಗುತ್ತಿರುವ CT Scan ಮತ್ತು MRI Scan ಸೇವೆಗಳಿಗೆ PHH ಕಾರ್ಡ್ ಹೊಂದಿರುವ ರೋಗಿಗಳಿಗೆ ಸಂಪೂರ್ಣ ಉಚಿತವಾಗಿ ಹಾಗೂ ಇತರರಿಗೆ ಶೇ.70% ರಷ್ಟು ಶುಲ್ಕ ವಿಧಿಸಿ CT Scan ಮತ್ತು MRI Scan ಸೇವೆಗಳನ್ನು ನೀಡಲಾಗುತ್ತಿದೆ. |
| ಈ) | ಇಲಾಖೆಯು ಎಷ್ಟು ಮೊತ್ತದ ಬಿಲ್ಲುಗಳನ್ನು ಪಾವತಿ ಮಾಡಲು ಬಾಕಿ ಇವೆ; ಯಾವ ಯಾವ ರೀತಿಯ ಸರಬರಾಜು ಹಾಗೂ ಸೇವೆಯ ಬಿಲ್ಲುಗಳು ಪಾವತಿಯಾಗಿಲ್ಲ; ಎಷ್ಟು ವರ್ಷದಿಂದ ಪಾವತಿಯಾಗಿಲ್ಲ? (ವಿವರ ನೀಡುವುದು) | CT and MRI ಸೌಲಭ್ಯಗಳನ್ನು ಒದಗಿಸುತ್ತಿರುವ ಖಾಸಗಿ ಸೇವಾ ಸಂಸ್ಥೆಗಳಿಗೆ (Service Providers) ಸರ್ಕಾರವು ಬಾಕಿ ಉಳಿಸಿಕೊಂಡಿರುವ ಬಿಲ್ಲು ಪಾವತಿಯ ಮೊತ್ತ ಕೆಳಕಂಡಂತಿವೆ:-<br><br>1. M/S Krsnaa Diagnostics:-ರೂ.23,09,95,260/- ಪಾವತಿಯು 2019 ರಿಂದ ಬಾಕಿ ಇರುತ್ತದೆ.<br><br>2. M/S K.V Hanchinal Pvt. Ltd-ರೂ.6,29,25,800/- ಬಿಲ್ ಪಾವತಿಯು 2021 ರಿಂದ ಬಾಕಿ ಇರುತ್ತದೆ.<br><br>3. M/S Dhanalaxmi Dresses-ರೂ.1,97,56,125/- ಬಿಲ್‌ಪಾವತಿಯು 2021 ರಿಂದ ಬಾಕಿ ಇರುತ್ತದೆ. |

**ಸಂಖ್ಯೆ: ಆಕುಕ 18 ಎಸ್.ಟಿ.ಕ್ಯೂ. 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳ ಪೂರೈಸಲು ಹೆಚ್ಚುವರಿ ಅನುದಾನ ₹3,000 ಲಕ್ಷ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1.ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ, ಇವರ ಏಕ ಕಡತಸಂ:HFWS-BUDG0OTHR/3/2026- BUD(H)-HEALTH AND FAMILY WELFARE SERVICES (E-2046934)
2.ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 105 ವೆಚ್ಚ-5/2026, ದಿನಾಂಕ: 10-02-2026.

*******

ಪ್ರಸ್ತಾವನೆ:

ರಾಜ್ಯದ ಸರ್ಕಾರಿ ಆರೋಗ್ಯ ಸಂಸ್ಥೆಗಳಾದ ಜಿಲ್ಲಾ ಆಸ್ಪತ್ರೆಗಳು, ತಾಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಇತರೆ ಆರೋಗ್ಯ ಸಂಸ್ಥೆಗಳಿಗೆ ಅಗತ್ಯ ಔಷಧಿಗಳ ಖರೀದಿಗಾಗಿ ಹೆಚ್ಚಿನ ಅನುದಾನವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ.

ಉಚಿತ ಔಷಧಿ ಯೋಜನೆ (Free Drugs Scheme) ಹಾಗೂ ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಅಡಿಯಲ್ಲಿ ನೀಡಲಾಗುವ ಅನುದಾನಬಳಸಿಕೊಂಡು ಆಸ್ಪತ್ರೆಗಳಲ್ಲಿ ಸ್ಥಳೀಯವಾಗಿ ಔಷದಿಗಳನ್ನು ಖರೀದಿಸಲಾಗಿತಿದೆ . ಕೇಂದ್ರ ಸರ್ಕಾರದ ಯೋಜನೆಯಾದ NHM ವತಿಯಿಂದ ಈ ಅನುದಾನ ಬಿಡುಗಡೆಯಾಗದೆ ಇರುವುದರಿಂದ , ಉಲೇಖ (1)ರಪ್ರಸ್ತಾವನೆಯಲ್ಲಿ ರಾಜ್ಯವಲಯದ ಜಿಲ್ಲಾ/ತಾಲ್ಲೂಕು/ಸಮುದಾಯ ಆರೋಗ್ಯ ಕೇಂದ್ರಗಳು /ಪ್ರಾರ್ಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುವ ಬಡ ರೋಗಿಗಳ ಹಿತದೃಷ್ಟಿಯಿಂದ ಅಗತ್ಯ ಔಷಧಗಳನ್ನು ಪೂರೈಸಲು ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು ಕೋರಲಾಗಿದೆ. ಇದರಿಂದ ಆರೋಗ್ಯ ಸಂಸ್ಥೆಗಳಲ್ಲಿನ ನಗದು ವರ್ಗಾವಣೆ ಸ್ಥಿತಿಯನ್ನು ಸುಧಾರಿಸಲು ಹಾಗೂ ಮುಂದಿನ ಎರಡು ತಿಂಗಳ ಅವಧಿಗೆ ಅಂದರೆ, ಮಾರ್ಚ್ ಅಂತ್ಯಕ್ಕೆ KSMSCL ವತಿಯಿಂದ ಅಗತ್ಯ ಔಷಧಗಳನ್ನು ಪೂರೈಸಲಾಗುವವರೆಗೆ ಈ ಬೇಡಿಕೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲ್ಕಂಡ ಪರಿಸ್ಥಿತಿಯನ್ನು ಪರಿಗಣಿಸಿ, ಹಣಕಾಸು ಇಲಾಖೆ ತಮ್ಮ ಉಲ್ಲೇಖಿತ ಅನುಮೋದನೆ ಸಂಖ್ಯೆ **FD 105 EXP-5/2026 ದಿನಾಂಕ 10.02.2026** ಮೂಲಕ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾಗಿರುವ KSMSCL ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ₹3,000 ಲಕ್ಷ (ಮೂರು ಸಾವಿರ ಲಕ್ಷ ರೂಪಾಯಿ ಮಾತ್ರ) ಹಣವನ್ನು ತಾತ್ಕಾಲಿಕವಾಗಿ ಎರಡು ತಿಂಗಳ ಅವಧಿಗೆ ಸ್ಥಳೀಯ ಔಷಧಿ ಖರೀದಿಗೆ ಬಳಸಲು ಅನುಮತಿ ನೀಡಿರುತ್ತದೆ.

## ಸರ್ಕಾರದ ಆದೇಶ ಸಂಖ್ಯೆ:ಆಕುಕ 33 ಎಫ್.ಪಿ.ಎಸ್ 2026
## ಬೆಂಗಳೂರು, ದಿನಾಂಕ:18.02.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವು ಕೆಳಕಂಡಂತೆ ಆದೇಶಿಸುತ್ತದೆ:

1. KSMSCL ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ₹3,000 ಲಕ್ಷ (ಮೂರು ಸಾವಿರ ಲಕ್ಷ ರೂಪಾಯಿ ಮಾತ್ರ) ಹಣವನ್ನು ತಾತ್ಕಾಲಿಕವಾಗಿ ಎರಡು ತಿಂಗಳ ಅವಧಿಗೆ ಅಗತ್ಯ ಔಷಧಿಗಳ ಸ್ಥಳೀಯ ಖರೀದಿಗಾಗಿ ಬಳಸಲು ಅನುಮತಿ ನೀಡಲಾಗಿದೆ.



File No. HFW/33/FPS/2026-FW-HEALTH AND FAMILY WELFARE SEC (Computer No. 2081646)
Generated from eOffice by DRAKSHAYINI, HFW-SO-FW(DJB), SECTION OFFICER, HEALTH AND FAMILY WELFARE SEC on 16/02/2026 01:07 PM

2. ಕರ್ನಾಟಕ ರಾಜ್ಯ ವೈದ್ಯಕೀಯ ಸರಕು ಸರಬರಾಜು ನಿಗಮ ನಿಯಮಿತ (KSMSCL) ಅವರು ₹3,000 ಲಕ್ಷ ಮೊತ್ತವನ್ನು ತಕ್ಷಣವೇ Suvarna Arogya Suraksha Trust (SAST)ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು.

3. SAST ಅವರು ಹಣ ಸ್ವೀಕರಿಸಿದ ನಂತರ, ಈ ಆದೇಶಕ್ಕೆ **ಲಗತ್ತಿಸಿರುವ ಅನುಬಂಧದಲ್ಲಿ** ನಮೂದಿಸಿದಂತೆ ಸಂಬಂಧಿತ ಸರ್ಕಾರಿ ಆಸ್ಪತ್ರೆಗಳ ಬ್ಯಾಂಕ್ ಖಾತೆಗಳಿಗೆ ಹಣವನ್ನು ಬಿಡುಗಡೆ ಮಾಡಬೇಕು.
4. ಸರ್ಕಾರಿ ಆರೋಗ್ಯ ಆಸ್ಪತ್ರೆಗಳು ಸ್ಥಳೀಯ ಖರೀದಿಯನ್ನು ಕೆಳಕಂಡ ನಿಯಮಾನುಸಾರ ಕೈಗೊಳ್ಳಬೇಕು:

   a. ಔಷಧಿಗಳ ಖರೀದಿ ಕಡ್ಡಾಯವಾಗಿ **GeM (Government e-Marketplace)** ಅಥವಾ ರಾಜ್ಯ ಸರ್ಕಾರದ **e-Procurement ವ್ಯವಸ್ಥೆಯ ಮೂಲಕವೇ** ಕೈಗೊಳ್ಳಬೇಕು. Or KTPP ಕಾಯ್ದೆ 1999 ಮತ್ತು ನಿಯಮ 2000ರ ಅನ್ವಯ ಖರೀದಿ ಪ್ರಕ್ರಿಯೇ ಕೈಗೊಳ್ಳುವುದು.
   b. ಖರೀದಿಸಲಾದ ಎಲ್ಲಾ ಔಷಧಿಗಳ ವಿವರಗಳನ್ನು **e-Aushadha ವ್ಯವಸ್ಥೆಯಲ್ಲಿ ತಕ್ಷಣ (ರಿಯಲ್‌ಟೈಮ್) ನವೀಕರಿಸಬೇಕು**.
   c. ಕೇವಲ **ಅತ್ಯಾವಶ್ಯಕ ಔಷಧಿಗಳನ್ನು** ಪ್ರಾಥಮಿಕತೆಯ ಆಧಾರದ ಮೇಲೆ ಮಾತ್ರ ಖರೀದಿಸಬೇಕು.
   d. ಬಿಡುಗಡೆಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು. ಆ ಸಂಬಂಧ ಬಳಕೆ ಪ್ರಮಾಣಪತ್ರವನ್ನು ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ105 ವೆಚ್ಚ-5/2026, ದಿ: 10-02-2026 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Drakshayini J.B 18/02/26

(ದ್ರಾಕ್ಷಾಯಿಣಿ ಜೆ.ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಕುಟುಂಬ ಕಲ್ಯಾಣ)

ಇವರಿಗೆ

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್.ಎಸ್.ಎ) ಕರ್ನಾಟಕ, "ಆಡಿಟ್ ಭವನ", ಅಂಚೆ ಪೆಟ್ಟಿಗೆಸಂ: 5398, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು,(ಇ&ಆರ್.ಎಸ್.ಎ)ಕರ್ನಾಟಕ, " ಆಡಿಟ್ ಭವನ ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು.

...3



le No. HFW/33/FPS/2026-FW-HEALTH AND FAMILY WELFARE SEC (Computer No. 2081646)
enerated from eOffice by DRAKSHAYINI, HFW-SO-FW(DJB), SECTION OFFICER, HEALTH AND FAMILY WELFARE SEC on 16/03/2026 01:07 PM

ಅನುಬಂಧ-2

ಕರ್ನಾಟಕ ಸರ್ಕಾರ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ರಾಯಚೂರು

ಎಸ್. ನಿಜಾಮರ ನವೀದ ಹತ್ತಿರ ರಾಯಚೂರು-584101 ದೂರವಾಣಿ:08532-226020
Email ID:-dhoraichur@gmail.com

ಸಂಖ್ಯೆ:ಜಿ.ಆ.ಕು.ಕ.ಅ.ಕಾ.ರಾ/ದಾಸ್ತಾನು/ತನಿಖೆ/ 51 /2025-26 ದಿನಾಂಕ: 23.02.2026

ಗೆ,

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ರಾಯಚೂರು.

ಮಾನ್ಯರೆ,

**ವಿಷಯ :** ರಾಯಚೂರು ನಗರದ ಜಲಾಲ್ ನಗರ ಬಡಾವಣೆಯ ಸ್ಮಶಾನದಲ್ಲಿ ಅನಾಮಧೇಯ ಔಷಧಗಳು ಪತ್ತೆಯಾಗಿರುವ ಕುರಿತು ತನಿಖಾ ತಂಡ ನೀಡಿರುವ ಅಂತಿಮ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ :** 1. ಕಾರ್ಯಾಲಯದ ಪತ್ರ ಸಂಖ್ಯೆ : ಜಿಆಕುಕರಾ/ಅಭಿವೃದ್ಧಿ/2025-26/ಇ-15294 ದಿನಾಂಕ 22.2.2026.
2. ಜಿಲ್ಲಾ ತನಿಖಾ ತಂಡ ಸಲ್ಲಿಸಿರುವ ವರದಿ ದಿನಾಂಕ : 23.02.2026ರಂತೆ

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಯಚೂರು ನಗರದ ಜಲಾಲ್ ನಗರ ಬಡಾವಣೆಯ ಸ್ಮಶಾನದಲ್ಲಿ ಕಂಡುಬಂದಿರುವ ಔಷಧಗಳ ಬಗ್ಗೆ ಉಲ್ಲೇಖಿತ ಪತ್ರ-1ರ ಅನ್ವಯ ದಿನಾಂಕ : 22.02.2026 ರಂದು ಜಿಲ್ಲಾ ತನಿಖಾ ಭೇಟಿ ನೀಡಿ ತನಿಖೆ ಕೈಗೊಳ್ಳಲಾಯಿತು. ಸದರಿ ಜಿಲ್ಲಾ ತನಿಖಾ ತಂಡ ಸಲ್ಲಿಸಿರುವ ಅಂತಿಮ ತನಿಖಾ ವರದಿಯನ್ನು ಹಾಗೂ ಅದಕ್ಕೆ ಸಂಭಂದಿಸಿದ ಎಲ್ಲಾ ವರದಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ಮಾನ್ಯರ ದಯಾಪರ ಮಾಹಿತಿಗಾಗಿ & ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು ರಾಯಚೂರು.

**ಪ್ರತಿಯನ್ನು :**

1. ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರುರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.

Scanned with OKEN Scanner
Scanned with OKEN Scan



ile No. HFW/18/STQ/2026-FW-HEALTH AND FAMILY WELFARE SEC (Computer No. 2095505)
Generated from eOffice by DRAKSHAYINI, HFW-SO-FW(DJB), SECTION OFFICER, HEALTH AND FAMILY WELFARE SEC on 16/03/2026 01:17 PM

ಅಂತಿಮ ವರದಿ

ಇವರಿಗೆ, ದಿನಾಂಕ : 23.02.2026

ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು,
ರಾಯಚೂರು.

ಮಾನ್ಯರೆ,

ವಿಷಯ : ರಾಯಚೂರು ನಗರದ ಜಲಾಲ್ ನಗರ ಬಡಾವಣೆಯಲ್ಲಿ ಅನಾಮದೇಯ ಔಷಧಗಳು ಪತ್ತೆಯಾಗಿರುವ ಕುರಿತು ತನಿಖೆ ಮಾಡಿರುವ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ : ತಮ್ಮ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : ಜಿಆಕುಕರಾ/ಅಭಿವೃದ್ಧಿ/2025-26/ಇ-15294 ದಿನಾಂಕ 22.2.2026.

*******

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜಿಲ್ಲಾ ತಂಡವು ರಾಯಚೂರು ನಗರದ ಜಲಾಲ್ ನಗರ ಬಡಾವಣೆಯ ಸ್ಮಶಾನದಲ್ಲಿ ಕಂಡುಬಂದಿರುವ ಔಷಧಗಳ ಬಗ್ಗೆ ಉಲ್ಲೇಖಿತ ಪತ್ರದ ಅನ್ವಯ ದಿನಾಂಕ : 22.02.2026 ರಂದು ಭೇಟಿ ನೀಡಿ ತನಿಖೆ ಕೈಗೊಳ್ಳಲಾಯಿತು. ಸದರಿ ಔಷದಿಗಳ ಜೊತೆ syringe ಗಳು ಇದ್ದು Govt. supply not for sale ಎಂದು ನಮೂದಾಗಿರುವ Pricon sterile hypodermic syrige with needle Batch No. 02IRC2539 D/M. 03/2025 D/E 02/2028 mfd by Iscon surgical limited, Jodhpur ರ ಈ ಕೆಳಕಂಡ ಸಂಸ್ಥೆಗಳಲ್ಲಿ ತನಿಖೆ ಮಾಡಲಾಯಿತು.

1. Karanataka State Medical supply corporation Ltd., Dist. Ware house Raichur.
2. Raichur Institute of Medical Science ( RIMS Raichur), stores
3. Opec Rajiv Gandhi Memorial Hospital stores.
4. Dist. TB Centre Drug stores Raichur.
5. DAPCO Drug stores Raichur.
6. Railway Hospital Dispensary Raichur.
7. Dist. Vaccine store, Raichur.

ತನಿಖೆ ಸಮಯದಲ್ಲಿ ಸದರಿ syringe ಗಳು ಈ ಮೇಲೆ ತಿಳಿಸಿರುವ ಸಂಸ್ಥೆಗಳಿಗೆ ಸರಬರಾಜು ಆಗದೇ ಇರುವುದಾಗಿ ತಿಳಿದು ಬಂದಿರುತ್ತದೆ ಹಾಗೂ ಸದರಿ syringe ಗಳ ದಾಸ್ತಾನು ಕಂಡುಬಂದಿರುವುದಿಲ್ಲ. ಮುಂದುವರೆದು, ದಿನಾಂಕ : 23.02.2026ರಂದು ಮಾನ್ಯ ಉಪನಿರ್ದೇಶಕರು (ಆಡಳಿತ), ಪಶುಪಾಲನಾ & ಪಶು ವೈದ್ಯ ಸೇವಾ ಇಲಾಖೆ ರಾಯಚೂರು ರವರ ಕಚೇರಿಗೆ ಭೇಟಿ ನೀಡಿ ತನಿಖೆ ಕೈಗೊಳ್ಳಾಯಿತು. ತನಿಖೆಯ ಸಮಯದಲ್ಲಿ ಮಾನ್ಯ ಉಪನಿರ್ದೇಶಕರು ರವರು ಹಾಜರಿದ್ದು ಸದರಿ Govt. supply not for sale ಎಂದು ನಮೂದಾಗಿರುವ 2ml syringe with needel 18g*1 1/2 Pricon, Batch No. 02IRC2539 D/M. 03/2025 D/E 02/2028 mfd by Iscon surgical limited, Jodhpur ಸಿರಂಜ್‌ಗಳನ್ನು ಸದರಿಯವರಿಗೆ Iscon surgical limited, Jodhpur ಸಂಸ್ಥೆಯಿಂದ ಸರಬರಾಜಾಗಿರುವುದಾಗಿ ತಿಳಿಸಿ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ (ಪ್ರತಿಗಳನ್ನು ಲಗತ್ತಿಸಿದೆ).

ಮುಂದುವರೆದು, ರಾಯಚೂರು ನಗರದ ಜಲಾಲ್ ನಗರ ಬಡಾವಣೆಯಲ್ಲಿನ ಸ್ಮಶಾನದ ಹತ್ತಿರ ಕಂಡುಬಂದಿರುವ Physician sample ಔಷಧಗಳನ್ನು ಪರಿಶೀಲಿಸಲಾಗಿ ಸದರಿ ಔಷದಿಗಳನ್ನು Biological E. Limited. Plot No 31 & 32, Pharma city, Dehradun, Uttarakandha ಸಂಸ್ಥೆಯವರು ತಯ್ಯಾರಿಸಿ ಮಾರ್ಕೆಟಿಂಗ್ ಮಾಡಿರುವುದು ಕಂಡುಬಂದಿರುತ್ತದೆ.



e No. HFW/18/STQ/2026-FW-HEALTH AND FAMILY WELFARE SEC (Computer No. 2095505)
enerated from eOffice by DRAKSHAYINI, HFW-SO-FW(DJR), SECTION OFFICER, HEALTH AND FAMILY WELFARE SEC on 16/03/2026 01:17 PM

ಇದರ ಕುರಿತು ಈ ಹಿಂದಿನ ಟೆರಿಟರಿ ಮ್ಯಾನೆಜರ್ ಶ್ರೀ. ಗೋವಿಂದ್ ರವರನ್ನು ವಿಚಾರಿಸಲಾಗಿ, ಅವರು ಪ್ರಸ್ತುತ ರಾಯಚೂರಿನ ಟೆರಿಟರಿ ಮ್ಯಾನೆಜರ್ ಹುದ್ದೆಯು ಖಾಲಿ ಇದ್ದು, ಸದರಿ ಸಂಸ್ಥೆಯಿಂದ ಅವರು ರಾಜಿನಾಮೆ ನೀಡಿರುತ್ತನೆಂದು ತಿಳಿಸಿರುತ್ತಾರೆ. ಹಾಗೂ ಶ್ರೀ. ಭೀಮೇಶ ರವರು ರಾಯಚೂರು ವಿಭಾಗಕ್ಕೆ ಏರಿಯಾ ಮ್ಯಾನೇಜರ್ ಆಗಿದ್ದು ಬಳ್ಳಾರಿಯಲ್ಲಿ ಇದ್ದುಕೊಂಡೆ ಕರ್ತವ್ಯವನ್ನು ನಿರ್ವಹಿಸುತ್ತಾರೆ ಎಂದು ತಿಳಿಸಿರುತ್ತಾರೆ. ಜಿಲ್ಲಾ ತನಿಖಾ ತಂಡವು ರಾಯಚೂರು ವಿಭಾಗಕ್ಕೆ ಏರಿಯಾ ಮ್ಯಾನೇಜರಾದ ಶ್ರೀ. ಭೀಮೇಶ ರವರಿಗೆ ದೂರವಾಣಿ ಮೂಲಕ ಕರೆ ಮಾಡಿದಾಗ ಸದರಿಯವರು ಯಾವುದೇ ಸರಿಯಾದ ಮಾಹಿತಿ ನೀಡಿರುವುದಿಲ್ಲ.

ಆದುದರಿಂದ, ಈ ಮೇಲಿನ ಎಲ್ಲಾ ತನಿಖೆಯ ಅನುಸಾರವಾಗಿ ಈ ಮೇಲ್ಕಂಡ ಎಲ್ಲಾ ಸಿರಂಜಿಗಳು ಮಾನ್ಯ ಉಪನಿರ್ದೇಶಕರು (ಆಡಳಿತ), ಪಶುಪಾಲನಾ & ಪಶು ವೈದ್ಯ ಸೇವಾ ಇಲಾಖೆ ರಾಯಚೂರು ರವರಿಗೆ ಸಂಭಂದಿಸಿದ್ದಾಗಿರುತ್ತವೆ ಹಾಗೂ ಉಳಿದ Physician sample ಔಷಧಗಳು Biological E. Limited, Plot No 31 & 32, Pharma city, Dehradun, Uttarakandha ಸಂಸ್ಥೆಯವರಿಗೆ ಸಂಭಂದಿಸಿದವಾಗಿರುತ್ತದೆ ಹಾಗೂ ಅದರ ಮಾರ್ಕೆಟಿಂಗ ಕಚೇರಿ ವಿಳಾಸವು 8/1&3 ಅಜಮಾಬಾದ್, ಹೈದರಾಬಾದ್-500 020 ಎಂದು ತನಿಖಾ ಸಮಯದಲ್ಲಿ ಕಂಡುಬಂದಿರುತ್ತದೆ.

ಈ ವರದಿಯನ್ನು ತಮ್ಮ ದಯಾಪರ ಮಾಹಿತಿಗಾಗಿ & ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ಲಗತ್ತು :

1. ಜಿಲ್ಲಾ ಔಷದ ಉಗ್ರಾಣ, ರಾಯಚೂರುರವರು ಸಲ್ಲಿಸಿರುವ ವರದಿ (ಪುಟ ಸಂಖ್ಯೆ 01 ರಿಂದ 06 ರವರೆಗೆ)
2. ರಾಯಚೂರು ಭೋಧಕ ಆಸ್ಪತ್ರೆಯವರು ಸಲ್ಲಿಸಿರುವ ವರದಿ (ಪುಟ ಸಂಖ್ಯೆ 07 ರಿಂದ 09 ರವರೆಗೆ)
3. ಓಪೆಕ್ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯವರು ಸಲ್ಲಿಸಿರುವ ವರದಿ (ಪುಟ ಸಂಖ್ಯೆ. 10)
4. ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ಸಲ್ಲಿಸಿರುವ ವರದಿ (ಪುಟ ಸಂಖ್ಯೆ. 11 ರಿಂದ 14 ರವರೆಗೆ)
5. ಜಿಲ್ಲಾ ಏಡ್ಸ ತಡೆ & ನಿಯಂತ್ರಣಾಧಿಕಾರಿಗಳು ಸಲ್ಲಿಸಿರುವ ವರದಿ (ಪುಟ ಸಂಖ್ಯೆ. 15 ರಿಂದ 17 ರವರೆಗೆ)
6. ಜಿಲ್ಲಾ ಲಸಿಕಾ ಉಗ್ರಾಣ, ರಾಯಚೂರುರವರು ಸಲ್ಲಿಸಿರುವ ವರದಿ (ಪುಟ ಸಂಖ್ಯೆ. 18 ರಿಂದ 20 ರವರೆಗೆ)
7. ಮಾನ್ಯ ಉಪನಿರ್ದೇಶಕರು (ಆಡಳಿತ), ಪಶುಪಾಲನಾ & ಪಶು ವೈದ್ಯ ಸೇವಾ ಇಲಾಖೆ ರಾಯಚೂರುರವರ ಪತ್ರ & ವರದಿ (ಪುಟ ಸಂಖ್ಯೆ. 21 ರಿಂದ 25 ರವರೆಗೆ)
8. ರಾಯಚೂರಿನ ಈ ಹಿಂದಿನ ಟೆರಿಟರಿ ಮ್ಯಾನೆಜರ್ ಶ್ರೀ. ಗೋವಿಂದ್ ರವರು ತಮ್ಮ ಕರ್ತವ್ಯಕ್ಕೆ ರಾಜಿನಾಮೆ ನೀಡಿರುವ ವರದಿ (ಪುಟ ಸಂಖ್ಯೆ. 26 ರಿಂದ 29 ರವರೆಗೆ)
9. ತನಿಖೆಯಲ್ಲಿ ಸಿಕ್ಕ ಖಾಸಗಿ ಕಂಪನಿಯ ಔಷದಿಗಳು (ಪುಟ ಸಂಖ್ಯೆ 30)
10. ತನಿಖೆಯಲ್ಲಿ ಸಿಕ್ಕ ಸರ್ಕಾರಿ ಔಷದಿಗಳು (ಪುಟ ಸಂಖ್ಯೆ 31)

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,
ಜಿಲ್ಲಾ ತನಿಖಾ ತಂಡ

1. Dr. GANESH K [signature] 23/2
2. Dr. Amrutha [signature]
3. Sachin. Asst Drug Controller, Raichur Circle [signature]
4. Abdur Rahaman Ahmed, Pharmacy Officer [signature]

IB/MKT/03 (REV 03)

**ISCON SURGICALS LIMITED**

**Iscon Surgicals Limited**
B-70, M.I.Area, Phase II, Basni
Jodhpur - 342 005 (Rajasthan)
DL.No. MFG/MD/2020/000064
GSTIN/UIN: 08AAACI3030K1ZT
State Name : Rajasthan, Code :

| | |
|---|---|
| Invoice No<br>ISLU2252000108 | Dated<br>14-Apr-25 |
| Delivery Note<br>U2/2526/D-0107 | Mode/Terms of Payment<br>AS PER R/C |
| Reference No. & Date<br>U2/SO-25/1062 dt. 14-Feb-25 | Other References |
| Buyer's Order No.<br>[illegible] | Dated<br>14-Feb-25 |
| Dispatch Doc No.<br>1000 23541054 | Delivery Note Date<br>14-Apr-25 |
| Dispatched through<br>Salesman | Destination<br>RAICHUR |

Consignee (Ship to)
**THE DEPUTY DIRECTOR (ADMIN)**
OFFICE OF THE DEPUTY DIRECTOR (ADMIN)
ANIMAL HUSBANDRY & VETERAINRY SERVICES
NEAR GUNJ CIRCLE VETERAINRY HOSPITAL COMPOUND
RAICHUR-584102
PH-8495019849

Buyer (Bill to)
**THE COMMISSIONER**
OFFICE OF THE COMMISSIONER
DEPARTMENT OF ANIMAL HUSBANDRY & VETERINARY SERVICE
PASHUPAALANA BHAVANA,
OPP. TO CBI OFFICE, BALLARI ROAD
HEBBAL
BANGALORE - 560024
(KARANATAKA)

Terms of Delivery
**PACKING INCLUDE**
**IGST@12%**
**FREIGHT PAID**
**T.CENCL**

| Description of Goods | HSN/SAC | Quantity | Rate | per | Amount |
|---|---|---|---|---|---|
| **02ML SYRINGE WITH NEEDLE 18GX1½" - PRICON** | 90183100 | 1,62,000 Nos. | 152.68 | Th'Nos | 2,47,341.60 |
| Batch : 02IRC2539 | | 1,38,400 Nos. | | | |
| Mfg Dt. : Mar-2025 | | | | | |
| Expiry : 29-Feb-28 | | | | | |
| Batch : 02IRD2518 | | 23,600 Nos. | | | |
| Mfg Dt. : Apr-2025 | | | | | |
| Expiry : 31-Mar-28 | | | | | |
| *IGST - INTEGRATED TAX* | | | | | 29,680.99 |
| *ROUNDED OFF* | | | | | 0.41 |
| Total | | 1,62,000 Nos. | | | 2,77,023.00 ₹ |

(Stamp) STOCK CERTIFICATE
Received all the Articles Mentioned in the bill correctly in good condition and Taken to Stock on 21/5/2025
Vide Page No 23

E. & O.E

Amount Chargeable (in words)
**Two Lakh Seventy Seven Thousand Twenty Three Indian Rupees Only**

Previous Balance : 2,67,02,199.00 ₹ Dr
Current Balance : 2,69,79,222.00 ₹ Dr

| HSN/SAC | Taxable Value | IGST Rate | IGST Amount | Total Tax Amount |
|---|---|---|---|---|
| 90183100 | 2,47,341.60 | 12% | 29,680.99 | 29,680.99 |
| Total | 2,47,341.60 | | 29,680.99 | 29,680.99 |

Tax Amount (in words) : **Twenty Nine Thousand Six Hundred Eighty Indian Rupees and Ninety Nine paise Only**

Company's Bank Details
A/c Holder's Name : **ISCON SURGICALS LIMITED**
Bank Name : **HDFC BANK CC A/C- 59200122334455**
A/c No. : **59200122334455**
Branch & IFS Code : **RATHI CHAMBER & HDFC0001420**
SWIFT Code

General Supply Condition
Declaration
1.Goods once sold will not be taken back 2.Terms of delivery of goods as per contract/Order, 3.18% interest P.A. will be charged on all outstanding remaining unpaid after due date.4 ISL disclam any liability for shortage,loss or damage after 7 days from date of receipt of goods.We declarethat this invoice shows the actual price of the goods described and that all particulars are true and correct

for Iscon Surgicals Limited

Prepared by | Verified by | Authorised Signatory

SUBJECT TO JODHPUR JURISDICTION

e No. [illegible] 2026-[illegible] (Computer No. [illegible])

Generated from eOffice by DRAKSHAYINI, [illegible] SECTION OFFICER, HEALTH AND FAMILY WELFARE SEC on 16/02/2026 01:17 PM